# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸ್ವೀಪ್ ನೋಡಲ್ ಅಧಿಕಾರಿ ಹಾಗೂ ಉಪ ಆಯುಕ್ತರು ದಾಸರಹಳ್ಳಿ ವಲಯ ಹೆಸರಘಟ್ಟ ಮೈನ್ ರೋಡ್ ಎಂ.ಇ.ಐ ಬಡಾವಣೆ, ಬಾಗಲಗುಂಟೆ, ಬೆಂ–73.

ಸಂಖ್ಯೆ:ಉಆ/ದಾವ/ಪಿಆರ್/867/2022–23. ದಿನಾಂಕ: 23.02.2023

## ಕಛೇರಿ ಆದೇಶ

ವಿಷಯ: 18 ಮತ್ತು 19 ನೇ ವಯೋಮಾನದ ಯುವ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡಿಸುವ ಆಂದೋಲನದ ಕಾರ್ಯಕ್ರಮದ ಬಗ್ಗೆ.

ಉಲ್ಲೇಖ: 1. ಮಾನ್ಯ ವಿಶೇಷ ಆಯುಕ್ತರು (ಚುನಾವಣೆ) ರವರ ವಿಡಿಯೋ ಸಂವಾದದ ಸಭೆಯ ದಿನಾಂಕ: 17.02.2023 ಹಾಗೂ 23.02.2023

2. ಉಪ ವಿಭಾಗವಾರು ಮಟ್ಟದಲ್ಲಿ ದಿನಾಂಕ: 22.02.2023 ಹಾಗೂ 23.02.2023 ರಂದು ಬಿಎಲ್ಓ ಸಭೆಯಲ್ಲಿ ನೀಡಲಾಗಿರುವ ಸೂಚನೆಗಳು.

<<<>>>

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖಿತ ಮಾನ್ಯ ವಿಶೇಷ ಆಯುಕ್ತರು (ಚುನಾವಣೆ) ರವರ ವಿಡಿಯೋ ಸಂವಾದ ಸಭೆಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬಹಳಷ್ಟು ಕಡಿಮೆ ಸರಾಸರಿ 18 ಮತ್ತು 19 ನೇ ವಯೋಮಾನದ ಯುವ ಮತದಾರರು ದಾಖಲಾಗಿದ್ದು, ಇನ್ನು ಬಹಳಷ್ಟು ಅರ್ಹ ಇರುವ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸುವ ಅಗತ್ಯತೆ ಇರುವುದರಿಂದ **ದಿನಾಂಕ: 23.02.2023 ರಿಂದ ದಿನಾಂಕ: 26.02.2023 ರವರೆಗೆ ಬೂತ್ ಲೆವೆಲ್ ಅಧಿಕಾರಿಗಳ ಮಟ್ಟದಲ್ಲಿ ಮನೆ ಮನೆ ಸಮೀಕ್ಷೆ ಕಾರ್ಯ ಕೈಗೊಂಡು ಪ್ರತಿಯೊಬ್ಬ ಬೂತ್ ಲೆವೆಲ್ ಅಧಿಕಾರಿ ಹೆಚ್ಚುವರಿಯಾಗಿ 10 ರಿಂದ 25 ಸಂಖ್ಯೆಯ 18 ಮತ್ತು 19 ನೇ ವಯೋಮಾನದ ಯುವ ಮತದಾರರನ್ನು ಪತ್ತೆ ಹಚ್ಚಿ ನಮೂನೆ–6 ರನ್ನು ವಿತರಿಸಿ ಅಗತ್ಯ ದಾಖಲಾತಿಗಳೊಂದಿಗೆ ಹಿಂಪಡೆಯಲು ಜೊತೆಗೆ Voter Helpline App ಮೂಲಕ NVSP ತಂತ್ರಾಂಶದ ಮೂಲಕ ಮತದಾರರ ಪಟ್ಟಿಗೆ ಸೇರಿಸಲು ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಲು 155–ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ಎಲ್ಲಾ** ಕಂದಾಯ ಅಧಿಕಾರಿಗಳು ಹಾಗೂ ಎಲ್ಲಾ ಉಪ ವಿಭಾಗಗಳ ಸಹಾಯಕ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಸಹಾಯಕ ಕಂದಾಯ ಅಧಿಕಾರಿಗಳು ತಮ್ಮ ವ್ಯಾಪ್ತಿಯ ವಾರ್ಡ್ ಮತ್ತು ಮತಗಟ್ಟೆವಾರು ಬಿಎಲ್ಓಗಳ ಮೇಲ್ವಿಚಾರಣೆಗಾಗಿ ನೇಮಿಸಿರುವ ಮೇಲ್ವಿಚಾರಕರ ಮುಖಾಂತರ ಈ ಮೇಲ್ಕಂಡ 04 ದಿನಾಂಕಗಳಂದು **(25.02.2023 ಹಾಗೂ 26.02.2023ರ ರಜಾ ದಿನಗಳು ಸೇರಿದಂತೆ) ಆಂದೋಲನ ಮಾದರಿಯಲ್ಲಿ ಮನೆ ಮನೆ ಸಮೀಕ್ಷೆ ಕಾರ್ಯ ಕೈಗೊಂಡು ಪ್ರತಿಯೊಂದು ಮತಗಟ್ಟೆಗೆ ಕನಿಷ್ಠ 10 ಗರಿಷ್ಠ 25** ಅಥವಾ ಅದಕ್ಕೂ ಮೇಲ್ಪಟ್ಟು 18 ಮತ್ತು 19ನೇ ವಯೋಮಾನದ ಯುವ **ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸಲು ಆಂದೋಲನವನ್ನು ಯಶಸ್ವಿಯಾಗಿ ಬೂತ್ ಮಟ್ಟದಲ್ಲಿ ಕಾರ್ಯ ರೂಪಕ್ಕೆ ತರಲು ಹಾಗೂ ಪ್ರತಿ ದಿನ ಮತಗಟ್ಟೆಯಲ್ಲಿ ಆಗುತ್ತಿರುವ ಪ್ರಗತಿ ವಿವರಗಳನ್ನು ದಾಸರಹಳ್ಳಿ ವಲಯದ ಉಪ ಆಯುಕ್ತರವರ ಕಛೇರಿಗೆ ಖುದ್ದು ಒದಗಿಸಲು ಎಲ್ಲಾ ಸಹಾಯಕ ಕಂದಾಯ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಲಾಗಿದೆ.**

ಈ ವಿಚಾರದಲ್ಲಿ ಯಾವುದೇ ಬಿಎಲ್‌ಓ, ಮೇಲ್ವಿಚಾರಕರು, ಸಹಾಯಕ ಕಂದಾಯ ಅಧಿಕಾರಿಗಳು ಹಾಗೂ ಕಂದಾಯ ಅಧಿಕಾರಿಗಳು ನಿರ್ಲಕ್ಷ್ಯತೆ ವಹಿಸಿದಲ್ಲಿ ಪ್ರಜಾ ಪ್ರತಿನಿಧಿ ಕಾಯ್ದೆ 1950ರ ನಿಯಮ ಅನ್ವಯ ಶಿಸ್ತು ಕ್ರಮ ಜರುಗಿಸಲು ಮಾನ್ಯ ವಿಶೇಷ ಆಯುಕ್ತರು (ಚುನಾವಣೆ) ರವರಿಗೆ ವರದಿ ಸಲ್ಲಿಸಲಾಗುವುದು ಎಂದು ಈ ಮೂಲಕ ತಿಳಿಯ ಪಡಿಸಿದೆ.

ಸ್ವೀಪ್ ನೋಡಲ್ ಅಧಿಕಾರಿ
ಹಾಗೂ ಉಪ ಆಯುಕ್ತರು
155-ದಾಸರಹಳ್ಳಿ ವಿಧಾನ ಕ್ಷೇತ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು(ಚುನಾವಣೆ) ಬಿಬಿಎಂಪಿ ರವರ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ಅಪರ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ ರವರ ಅವಗಾಹನೆಗೆ ಬಿಬಿಎಂಪಿ
4. ವಲಯ ಆಯುಕ್ತರು, ದಾಸರಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಮಾನ್ಯ ವಲಯ ಜಂಟಿ ಆಯುಕ್ತರು(ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಂದಾಯ ಅಧಿಕಾರಿ(ದಾಸರಹಳ್ಳಿ/ಹೆಗ್ಗನಹಳ್ಳಿ) ಹಾಗೂ ಮತದಾರರ ನೋಂದಣಾಧಿಕಾರಿ ದಾಸರಹಳ್ಳಿ ವಿಭಾಗ ರವರ ಕ್ರಮಕ್ಕಾಗಿ ಕಳುಹಿಸಿದೆ.
7. ಸಹಾಯಕ ಕಂದಾಯ ಅಧಿಕಾರಿ (ಶೆಟ್ಟಿಹಳ್ಳಿ, ದಾಸರಹಳ್ಳಿ, ಪೀ.ಕೈ.ಪ್ರ, ಹೆಗ್ಗನಹಳ್ಳಿ) ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳು ರವರ ಕ್ರಮಕ್ಕಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.